ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 3.

ಮೃತಪಟ್ಟ ತರೀಕೆರೆ ತಾಲ್ಲೂಕು ಲೇಟ್ ಅಮಲ್ದಾರ್ ತಾಯರ್ ಸಾಬರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಅಬ್ದುಲ್‌ಖಾದರ್‌ಸಾಬ್, ಮೃತಪಟ್ಟ ಸದರೀ ತಾಯರ್‌ಸಾಬರಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗ ಕಸಬಾ ಸವ್ಯಾಪಾಳ್ಯದಲ್ಲಿರುವ ಅಬ್ದುಲ್‌ಖಾದರ್ ಸಾಬನು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ತಾಯರ್‌ಸಾಬರ ಜಿಂದಗೀ ಬಗ್ಯಾಗಿ ಬರತಕ್ಕ 430 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾವ ಅಬ್ದುಲ್‌ಖಾದರಸಾಬನ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳ್ಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಾಯರ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್.

ನೋಟೀಸ್.

ಕೊಡಗು ಫಾರೆಸ್ಟ್ಸ್ ಡಿಪ್ಯುಟಿ ಕರ್ಜಸರ್‌ವೇಟರ್ ಆಫೀಸಿನಿಂದ.

ತಾರೀಖು 23ನೇ ಮಾಹೆ ಡಿಸಂಬರ್ 1886.

ಇದರ ಕೆಳಗೆ ನಮೂದಿಸುವ ನಾಟಗಳನ್ನು ಮೈಸೂರು ಡಿಸ್ಟ್ರಿಕ್ಟ್ ಹುಣಸೂರಲ್ಲ ಇರುವ ಕೊಡಗು ಡಿಪೋದಲ್ಲಿ ಬರುವ ಸ್ಯ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾದ ಹರಾಜು ಮೂಡೋಣಾಗುತ್ತದೆ.

ಸಾಗುವಾನಿ ನಾಟಗಳು 600. ಇತರ ನಾಟಗಳು 500.

ಪರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರ ಸ್ಯ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯಲ್ಲಿ ನಮೂದಿರುವ ಮೇರೆ.

ಯಫ್. ಬಿ. ಡಿಕ್ಕ್ರ್ಸ್,
ಕೊಡಗು ಫಾರೆಸ್ಟ್ಸ್ ಡಿಪ್ಯುಟಿ ಕರ್ಜಸರ್‌ವೇಟರ್.

ಖಾಸಾಗಿ ಪ್ರಕಟನೆ.

ನೋಟೀಸ್.

ರೆವರೆಂಡ್ ಎ. ಮುಲ್ಲರ್, ಎಸ್. ಜೆ. ಇವರಿಂದ ರಚಿಸಲ್ಪಟ್ಟ ಹೋಮ್ಯೋಪೆತಿಕ್ ವೈದ್ಯ ಪುಸ್ತಕ—ಇಂಗ್ಲಿಷ್ ಪುಸ್ತಕಕ್ಕೆ ರೂಪಾಯಿ 1—8—0; 250 ಪುಟಗಳುಳ್ಳ ಕರ್ನಾಟಕ ಪುಸ್ತಕಕ್ಕೆ ರೂಪಾಯಿ 1; ಟುಪ್ಪಾಲ್ ದಸ್ತೂರಿ ಕೂಡಿ—ಮಂಗಳೂರು ಸೈಂಟಿಲ್ ಲೋಯಿಸ್ಯೂಸ್ ಕಾಲೇಜಿನ ಬಡಜನರ ಹೋಮ್ಯೋಪೆತಿಕ್ ವೈದ್ಯಶಾಲೆಯ ಮೇನೇಜರರ ಕೂಡೆ ಅಪೇಕ್ಷಿಸಿದ್ದಲ್ಲಿ ಕಳಿಸ್ಕುವನು.